ದಿನಾಂಕ 23.09.2024 ರಂದು ಪಿಡಬ್ಲ್ಯೂ1 ರವರನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಶ್ರೀ ಹೆಚ್ ಎಸ್ ಎಂ ಎಂ ವಕೀಲರಿಂದ 3ನೇ ಪ್ರತಿವಾದಿ ಪರವಾಗಿ

**ನಾನು ಬಿ.ಇ. ವ್ಯಾಸಂಗವನ್ನು ಬೆಂಗಳೂರಿನಲ್ಲಿ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ 25.09.1994. 1ನೇ ಪ್ರತಿವಾದಿ ನನ್ನ ತಂದೆ ಮತ್ತು 2ನೇ ಪ್ರತಿವಾದಿ ನನ್ನ ಅಕ್ಕ ಎಂದರೆ ಸರಿ. ನನ್ನ ಅಕ್ಕ ವೈದ್ಯಳು. ನನ್ನ ತಾಯಿಯ ಹೆಸರು ಅನುಪಮ. ನನ್ನ ತಂದೆ ಮತ್ತು ತಾಯಿ ವಕೀಲರು ಎಂದರೆ ಸರಿ. ನಾನು 3ನೇ ಪ್ರತಿವಾದಿಯನ್ನು ನೋಡಿರುವುದಿಲ್ಲ. ದಾವೆಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಮ್ಮ ತಂದೆಗೆ ಇಬ್ಬರು ಸಹೋದರರು ಇರುತ್ತಾರೆ. ನನ್ನ ತಾತ ಸಹ ವಕೀಲರಾಗಿದ್ದರು ಮತ್ತು ಶಾಸಕರು ಆಗಿದ್ದರು ಎಂದರೆ ಸರಿ. ನನ್ನ ಅಜ್ಜಿಯ ಹೆಸರು ಚೆನ್ನಮ್ಮ. ನಿಪಿ-2 ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-2 ರಲ್ಲಿ ನಮೂದಿಸಿರುವ ಡಿ ಷೆಡ್ಯೂಲ್ ಸ್ವತ್ತು ನಮ್ಮ ತಂದೆಗೆ ಬಂದಿರುತ್ತದೆ ಎಂದರೆ ಸರಿ. ದಾವಾ 2ನೇ ಅನುಸೂಚಿ ಸ್ವತ್ತು ಸಹ ಪಿತ್ರಾರ್ಜಿತವಾದ ಸ್ವತ್ತು. ಅದು ಮೂಲತಃ ನನ್ನ ತಾತನಿಗೆ ಸೇರಿತ್ತು. ನಿಪಿ-2 ವಿಭಾಗ ಆಗುವ ಕಾಲಕ್ಕೆ ನನ್ನ ತಾತ ಬದುಕಿರಲಿಲ್ಲ. ನಿಪಿ-2 ನ್ನು ಹೊರತುಪಡಿಸಿ ದಾವಾ 2ನೇ ಅನುಸೂಚಿ ಸ್ವತ್ತು ನನ್ನ ತಾತನ ಹೆಸರಿನಲ್ಲಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆ ನೋಡಿರುವುದಿಲ್ಲ. ನಿಪಿ-3 ರಲ್ಲಿ ನನ್ನ ಅಜ್ಜಿಯ ಹೆಸರಿದ್ದು, ನನ್ನ ತಾತನ ಹೆಸರಿಲ್ಲ ಎಂದರೆ ಸರಿ. ಆನಂತರ ನನ್ನ ತಂದೆಯ ಹೆಸರನ್ನು ತೋರಿಸಲಾಗಿದೆ ಎಂದರೆ ಸರಿ.**

**2. ನಿಪಿ-2 ಸರಿ ಇಲ್ಲ ಎಂದು ಯಾರು ಅದನ್ನು ಪ್ರಶ್ನಿಸಿರುವುದಿಲ್ಲ. ನಿಪಿ-6 ಕ್ರಯ ಪತ್ರ ಆಗಿರುವುದು ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ದಿ. 26.07.2023 ರಂದು ನಾನು ಮನೆಯಲ್ಲಿದ್ದಾಗ ಮನೆಯಿಂದ ಹೊರ ಹಾಕಲು ಬಂದಾಗ ವಿಚಾರ ಗೊತ್ತಾಗಿರುತ್ತದೆ ಎಂದು ಉತ್ತರಿಸುತ್ತಾರೆ. 3ನೇ ಪ್ರತಿವಾದಿ ನನ್ನ ತಂದೆಯ ವಿರುದ್ಧ ಓ ಎಸ್ 722/2016 ನ್ನು ಸಲ್ಲಿಸಿದ್ದರು ಎಂದರೆ**

This is a True Copy of the Court Records Online. Authenticated @ districts.ecourtsindia.com/cnr/KAHS020017782023/truecopy/order-4.pdf

www.ecourtsindia.com

ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ನನ್ನ ತಂದೆ ಆರ್ ಎ ನಂ. 14/23 ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದು ವಜಾ ಆಗಿರುತ್ತದೆ ಎಂದರೆ ಸರಿ. ಮೇಲಲ್ಮನವಿ ಚಾಲ್ತಿಯಲ್ಲಿರುವಾಗ ಬಾಡಿಗೆ ಹಣವಾಗಿ 32 ಲಕ್ಷ ಹಣ ಬಾಕಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಜಾರಿ ಅರ್ಜಿಯಲ್ಲಿ ಸ್ವಾಧೀನ ಹೊಂದುವಂತೆ ಆದೇಶ ಆಗಿತ್ತು ಎಂದರೆ ಸರಿ. ನನ್ನ ತಾಯಿಯ ಕೋರಿಕೆಯ ಮೇರೆಗೆ ಒಂದು ವಾರ ಸಮಯಾವಕಾಶ ನೀಡಲಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ 3ನೇ ಪ್ರತಿವಾದಿ ದಾವಾ 2ನೇ ಅನುಸೂಚಿ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿ. ಈಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ ಪ್ರಕರಣ ಬಾಕಿ ಇರುತ್ತದೆ ಎಂದರೆ ಸರಿ.

3. ನಿಪಿ-6 ರಲ್ಲಿ ನನ್ನ ತಂದೆ ದಿ. 29.12.2011 ರಂದು ಕ್ರಯ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿಗೆ ದಿ. 23.07.2004 ರ ಒಂದು ಅಫಿಡವಿಟ್ ಅನ್ನು ತೋರಿಸಲಾಗಿ ಅದರಲ್ಲಿರುವ ಭಾವಚಿತ್ರಗಳು ತಮ್ಮ ತಂದೆ, ತಾಯಿ, ತಮ್ಮ ಸಹೋದರಿ ಹಾಗೂ ತನ್ನ ಭಾವಚಿತ್ರ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ದಾವಾ 2ನೇ ಅನುಸೂಚಿ ಸ್ವತ್ತನ್ನು ದಿ. 30.10.1975 ರಂದು ನನ್ನ ಅಜ್ಜಿ ಖರೀದಿಸಿರುತ್ತಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿಗೆ ಸದರಿ ಕ್ರಯ ಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ದಾವಾ 2ನೇ ಅನಸೂಚಿ ಸ್ವತ್ತು ನನ್ನ ಅಜ್ಜಿಯ ಸ್ವತ್ತಾಗಿರುವುದರಿಂದ ಅದು ಪಿತ್ರಾರ್ಜಿತ ಸ್ವತ್ತಲ್ಲ ಎಂದರೆ ಸರಿಯಲ್ಲ. ದಾವಾ 2ನೇ ಅನಸೂಚಿ ಸ್ವತ್ತಿನಲ್ಲಿ ನಾನು, 1 ಮತ್ತು 2ನೇ ಪ್ರತಿವಾದಿಗಳು ಮತ್ತು ನನ್ನ ತಾಯಿ ಸ್ವಾಧೀನದಲ್ಲಿದ್ದು ಒಟ್ಟಿಗೆ ವಾಸ ಮಾಡುತ್ತಿರುತ್ತೇವೆ ಎಂದರೆ ಸರಿ. ನನ್ನ ತಾಯಿ ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ಜುಡಿಶಿಯಲ್ ಮೆಂಬರ್ ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KAHS020017782023/truecopy/order-4.pdf

4. ದಾವಾ 2ನೇ ಅನಸೂಚಿ ಸ್ವತ್ತಿಗೆ ನಮ್ಮ ತಂದೆಯೇ ಮಾಲೀಕರಾಗಿದ್ದರಿಂದ ಅದನ್ನು ಕ್ರಯ ಕರಾರು ಪತ್ರ ಮಾಡಿಸಿಕೊಂಡಿದ್ದು ಆನಂತರ ಕ್ರಯ ಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಮತ್ತು ನನ್ನ ಅಕ್ಕಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ, ಆ ಕಾರಣಕ್ಕಾಗಿ ನಿಡಿ-1 ನ್ನು ನಾವು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2 ರ ಪ್ರಕಾರ ನಮ್ಮ ತಂದೆಗೆ 5 ಐಟಂ ಜಮೀನು ಮತ್ತು 1 ಐಟಂ ಮನೆ ಬಂದಿರುತ್ತದೆ ಎಂದರೆ ಸರಿ. ನಿಪಿ-2 ರಲ್ಲಿ ನಮೂದಿಸಿರುವ ಸ.ನಂ. 125, ಸ.ನಂ. 81, ಸ.ನಂ. 86 ಮತ್ತು ಸ.ನಂ. 89 ರ ಸ್ವತ್ತನ್ನು ಏಕೆ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನಾವು ಎಲ್ಲರ ಒಪ್ಪಿಗೆ ಮಾರಾಟ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಸ.ನಂ, 125 ರ ಜಮೀನನ್ನು ಕಿರಣ್ ಎಂಬುವರಿಗೆ 2018 ರಲ್ಲಿ ಮಾರಾಟ ಮಾಡಿದ್ದು ಉಳಿದ ಮೂರು ಸರ್ವೆ ನಂಬರ್ ಗಳ ಜಮೀನುಗಳನ್ನು ನಾನು ಮೈನರ್ ಇದ್ದಾಗ ಮಾರಾಟ ಮಾಡಲಾಗಿರುತ್ತದೆ. ಅವುಗಳಿಗೆ ಸಂಬಂಧಪಟ್ಟಂತೆ ನಾನು ಯಾವುದೇ ದಾವೆ ಮಾಡಿರುವುದಿಲ್ಲ. ಸ.ನಂ, 125ರ ಜಮೀನಿನ ಕ್ರಯ ಪತ್ರ ಇರುತ್ತದೆ ಬೇರೆ ಜಮೀನುಗಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

5. ದಾವಾ 1ನೇ ಅನುಸೂಚಿ ಸ್ವತ್ತು ಸ.ನಂ. 94 ರ ಜಮೀನಿಗೆ ನಮ್ಮ ತಂದೆ ಕ್ರಯ ಕರಾರು ಪತ್ರ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಸಂಬಂಧ ಸಕಲೇಶಪುರ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಡಿಕ್ರಿ ಆಗಿದ್ದು ಕ್ರಯ ಪತ್ರ ಬರೆದುಕೊಡಬೇಕು ಎಂದು ಆದೇಶ ಮಾಡಲಾಗಿದೆ ಎಂದರೆ ಗೊತ್ತು. ನನ್ನ ತಂದೆಯ ವಿರುದ್ಧ ಸುಮಾರು 10-15 ಚೆಕ್ ಬೌನ್ಸ್ ಪ್ರಕರಣ ಹಾಸನ, ಬೆಂಗಳೂರು, ಸಕಲೇಶಪುರ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಗೊತ್ತಿಲ್ಲ. ನನ್ನ ತಂದೆಗೆ ಸಾಕಷ್ಟು ಸಾಲ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯ ಜೊತೆ ಮಾತನಾಡುವುದಿಲ್ಲ. ನನ್ನ ತಂದೆಯ ಎಲ್ಲಾ ವ್ಯವಹಾರಗಳು ನನಗೆ ಗೊತ್ತಿದ್ದರು ಸಹ ಮತ್ತು ನಾನು

This is a True Copy of the Court Records Online. Authenticated @ districts.ecourtsindia.com/cnr/KAHS020017782023/truecopy/order-4.pdf

**ನನ್ನ ತಂದೆ ಸೇರಿಕೊಂಡೇ ದಾವೆ ಸಲ್ಲಿದ್ದರೂ ಸಹ ಏನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ವಿಚಾರ 2ನೇ ಪ್ರತಿವಾದಿಗೂ ಸಹ ಗೊತ್ತು. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲದೆ ಇದ್ದರೂ ಸಹ 3ನೇ ಪ್ರತಿವಾದಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ನನ್ನ ತಂದೆಯ ಚಿತಾವಣೆ ಮೇರೆಗೆ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.**

**ಶ್ರೀ ಎಂ ಎಸ್ ಟಿ ವಕೀಲರು 1 ಮತ್ತು 2ನೇ ಪ್ರತಿವಾದಿಗಳ ಪರವಾಗಿ ಪಾಟೀಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ, ಆದರೆ ಯಾವುದೇ ಸಕಾರಣಗಳನ್ನು ಕೊಟ್ಟಿರುವುದಿಲ್ಲ, 1 ಮತ್ತು 2ನೇ ಪ್ರತಿವಾದಿಗಳು ಸಹ ಹಿಸ್ಸಾ ಹಕ್ಕು ಬೇಕು ಎಂದು ಕೋರಿಕೊಂಡಿದ್ದು, ವಾದಿಯ ದಾವೆಯನ್ನು ಡಿಕ್ರಿ ಮಾಡಬೇಕಾಗಿ ತಮ್ಮ ಲಿಖಿತ ತಕರಾರಿನಲ್ಲಿ ತಿಳಿಸಿರುವುದರಿಂದ ಅವರ ಮನವಿಯನ್ನು ತಿರಸ್ಕರಿಸಿ ಪಾಟೀಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ.**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಹಾಸನ.

This is a True Copy of the Court Records Online. Authenticated @ districts.ecourtsindia.com/cnr/KAHS020017782023/truecopy/order-4.pdf